**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪೊನ್ನಂಪೇಟೆ.**

**Cr.M.C. No. 129/2024**

ದಿನಾಂಕಃ **16.06.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | : | ಕೆ. ಎನ್. ಸೋಮಣ್ಣ |
| ತಂದೆ ಹೆಸರು | : | ಕೆ. ಬಿ. ನಾಣಯ್ಯ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ಗೋಣಿಕೊಪ್ಪ |

ಮುಖ್ಯ ವಿಚಾರಣೆಃ ಶ್ರೀ ಕೆ. ಪಿ. ಬಿ. ವಕೀಲರಿಂದ ಃ -

ಮದುವೆಯಾದ ನಂತರ ನನ್ನ ತಂದೆಯ ಮನೆಯಲ್ಲಿದ್ದೆ. ಮದುವೆಯ ನಂತರ ಬ್ಯಾಂಕ್ ಅಕೌಂಟ್ ತೆರೆಯುವಾಗ ನನ್ನ ಹೆಂಡತಿ ವಯಸ್ಸಿನಲ್ಲಿ ನನಗಿಂತ ದೊಡ್ಡವಳು ಎಂದು ಆಗ ತಿಳಿಯಿತು. ಈ ಮೋಸದಿಂದ ನನಗೆ ಬೇಜಾರಾಯಿತು. ನಂತರ 2012 ರಲ್ಲಿ ನಮಗೆ ಗಂಡು ಮಗು ಆಯಿತು. ಮಗುವಿನ ನಾಮಕರಣದ ಎಲ್ಲ ಖರ್ಚು ನಾನೇ ಭರಿಸಿ, ನಾನೇ ಮಾಡಿರುತ್ತೇನೆ. 7 ತಿಂಗಳ ಬಾಣಂತಿ ಅವರ ತವರೂರಿಗೆ ಆಕೆ ಹೋಗಲಿದ್ದಳು, ಮಗು ಹುಟ್ಟಿದ 3 ತಿಂಗಳ ನಂತರ ಮಗುವಿನ ನಾಮಕರಣ ಮಾಡಿರುತ್ತೇನೆ. ಮಗುವಿನ ನಾಮಕರಣವಾದ 3 ತಿಂಗಳ ನಂತರ ಮನೆಗೆ ಮಗ ಜೊತೆ ಬಂದಿರುತ್ತಾರೆ. ಬೇಜಾವಬ್ದಾರಿಯಿಂದ ಮಗುವನ್ನು ನೋಡಿಕೊಳ್ಳದೇ ಯಾವಾಗಲೂ ಬೇರೆಯವರೊಂದಿಗೆ ಫೋನಿನಲ್ಲಿ ಮಾತನಾಡಿಕೊಂಡು ಇರುತ್ತಿದ್ದರು. ಮಗುವನ್ನು ನಾನು, ನನ್ನ ತಂದೆ ತಾಯಿ ನೋಡಿಕೊಳ್ಳುತ್ತಿದ್ದರು.

ನನ್ನ ಹೆಂಡತಿಗೆ ಆಕೆಯ ಬೆಂಗಳೂರಿನ ಹಳೆ ಮನೆಯ ಮಾಲೀಕರು ಕಿರಣ್ ಎಂಬುವವರು ಫೋನ್ ಮಾಡುತ್ತಿದ್ದ. ಈಕೆಯು ಅವರಿಗೆ ಫೋನ್ ಮಾಡುತ್ತಿದ್ದಳು. ನಾನು ನನ್ನ ಹೆಂಡತಿಯ ಫೋನ್ ನೋಡಿದಾಗ ಇತನ ಜೊತೆ ಹಲವಾರು ಬಾರಿ ಮಾತನಾಡಿರುವುದು ಕಂಡು ಬಂದು ನನಗೆ ಬೇಜಾರಾಯಿತು. ಕಿರಣ್

ಎಂಬುವವರನ್ನು ನಾನು ಬೇಟಿ ಮಾಡಿಲ್ಲ. ಈ ವಿಚಾರವಾಗಿ ಸುಮಾರು ಬಾರಿ ಜಗಳವಾಗಿದ್ದು, ಈ ವಿಷಯವನ್ನು ಅವರ ತಂದೆ ತಾಯಿಗೆ ಹೇಳಿದರೆ ಆಕೆಯು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಹೇಳುತ್ತಿದ್ದಳು. ತಾಯಿಗೆ ಶಸ್ತ್ರ ಚಿಕಿತ್ಸೆ ಎಂದು ಬೆಂಗಳೂರಿಗೆ ಹೋಗಿದ್ದು, ಆಗ ಕಿರಣ್ ಎಂದು ನನಗೆ ಪರಿಚಯ ಮಾಡಿಕೊಟ್ಟಿದ್ದಳು.

ನನ್ನನ್ನು ಮತ್ತು ನನ್ನ ಕುಟುಂಬವನ್ನು ಪ್ರೀತಿಯಿಂದ ಕಾಣುತ್ತಿರಲಿಲ್ಲ. ನನ್ನ ಮಗುವನ್ನು Loins School Gonikoppa ಗೆ ಸೇರಿಸಿದ್ದೇನೆ. ಮಗುವಿನ ವಿದ್ಯಾಭ್ಯಾಸಕ್ಕೂ ಕೂಡ ಗಮನ ಕೊಡುತ್ತಿರಲಿಲ್ಲ. ನನ್ನ ತಾಯಿ ಮಗುವಿಗೆ ಹೇಳಿಕೊಡುತ್ತಿದ್ದಳು. ಮಗುವಿನ Markscard ಗಳಿಗೆ ನನ್ನ ಹೆಂಡತಿ ಸಹಿ ಮಾಡಿ ಇಟ್ಟು ಬಿಡುತ್ತಿದ್ದಳು, ಆದರೆ ಮಗವಿನ ಕಾಳಜಿ ಆಕೆಗೆ ಇರಲಿಲ್ಲ. ಮಗುವಿಗೆ ಹೇಳಿಕೊಡು ಎಂದು ಹೇಳಿದ್ದಾಗಲೂ , ಮಗುವಿಗೆ ಹೊಡೆಯುತ್ತಿದ್ದಳು. ಮಗುವಿಗೆ ಬಾತ್ ರೂಮ್‌ನ ಮಗ್ ನಲ್ಲಿ ಹೊಡೆದಿದ್ದಳು. ಮಗುವಿನ ಜೊತೆ ನಾನು ಸಂತೋಷವಾಗಿರುವುದನ್ನು ನೋಡಿ ಇಷ್ಟ ಪಡುತ್ತಿರಲಿಲ್ಲ. ಮೇಲೆ ಹೇಳಿದ ಎಲ್ಲ ವಿಚಾರಗಳು ಅವರ ತಂದೆ ತಾಯಿಗೆ ಹೇಳಿದ್ದೇನೆ.

2017 ರಲ್ಲಿ ನನಗೆ ಮಗಳು ಹುಟ್ಟಿರುತ್ತಾಳೆ. ನನ್ನ ಮಗಳ ಮಗುವಿನ ನಾಮಕರಣ ನಾನೇ ಮಾಡಿದ್ದೇನೆ. ನನ್ನ ಹೆಂಡತಿಯ ತಂದೆ ತಾಯಿ ನಾಮಕರಣಕ್ಕೆ ಬಂದಿಲ್ಲ, ಈ ನಾಮಕರಣ ನಾನೇ ಮಾಡಿದ್ದೇನೆ. ನನ್ನ ಮಗನನ್ನು ಹೇಗೆ ನೋಡಿಕೊಳ್ಳುತಿದ್ದಳು ನನ್ನ ಮಗಳನ್ನು ಅದೇ ರೀತಿ ಜವಾಬ್ದಾರಿ ಇಲ್ಲದೇ ಸಾಕುತ್ತಿದ್ದಳು. 2018 ರಲ್ಲಿ ನನ್ನನ್ನು ಮತ್ತು ನನ್ನ ಮಕ್ಕಳನ್ನು ಬೇರೆ ಕೋಣೆಯಲ್ಲಿ ಇರಬೇಕಾಯಿತು ಇಲ್ಲ ಎಂದರೆ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ಹೇಳುತ್ತಿದರು. ನನ್ನ ಮೇಲೇನೆ ಇಲ್ಲ ಸಲ್ಲದ ಆರೋಪಗಳು ಮಾಡುತ್ತ ಅಕ್ರಮ ಸಂಬಂಧ ಗಂಟು ಹಾಕುತ್ತಿದ್ದಳು. ಈ ಸಂಬಂಧ ಪಂಚಾಯಿತಿ ಮಾಡಿಸಿದೆ. ನಾನು ಮತ್ತು ನನ್ನ ಹೆಂಡತಿ ಮಕ್ಕಳು ಬೇರೆ ಮನೆಯಲ್ಲಿ ವಾಸ ಮಾಡಲು ನಿರ್ಧಾರವಾಯಿತು. ಈ ರೀತಿ ಒಪ್ಪಿ ಕೊಂಡಿದ್ದ ನನ್ನ ಹೆಂಡತಿ ಅವರ ತಂದೆ ತಾಯಿ ಮಾತು ಕೇಳಿ ಬೇರೆ ಮನೆಗೆ ಬರಲು ನಿರಾಕರಿಸಿದರು. ನಾನು ಮಕ್ಕಳನ್ನು forcefully ಆಕೆಯಿಂದ ದೂರ ಮಾಡಿದೆ ಸುಳ್ಳು ದೂರು ಕೊಟ್ಟಿರುತ್ತಾಳೆ. ಈಗ ನಾನು ಮತ್ತು ನನ್ನ

ಮಕ್ಕಳು ಬೇರೆ ಹೋಗಿದ್ದೇವೆ. ಈಗಲೂ ನನ್ನ ಹೆಂಡತಿ ನನ್ನ ತಂದೆಯ ಮನೆಯಲ್ಲೇ ಇದ್ದಾಳೆ. ಅರ್ಜಿಯಲ್ಲಿ ಕೋರಿರುವಂತೆ ನನ್ನ ತಂದೆಯೇ ಆಕೆಗೆ ಎಲ್ಲ ಸೌಕರ್ಯಗಳನ್ನು ಕೊಡುತ್ತಿದ್ದಾರೆ. ಆಕೆಗೆ ಅಲ್ಲಿ ಇರಲು ಯಾವುದೇ ತೊಂದರೆ ಇಲ್ಲ. 2018 ರಿಂದ ನಾನು ಮತ್ತು ನನ್ನ ಮಕ್ಕಳು ಬೇರೆ ಕೋಣೆಯಲ್ಲಿ ಮಲಗುತ್ತಿದ್ದೇವೆ.

2024 ರಲ್ಲಿ ಗೋಣಿಕೊಪ್ಪ ಮನೆಗೆ ಹೋದೆವು. ನನಗೆ ಮಕ್ಕಳನ್ನು ನೋಡಿ ಕೊಳ್ಳಲು ಕಷ್ಟವಾಗುತ್ತಿದೆ, ಅದರ ಜೊತೆ ವಯಸ್ಸಾದ ನನ್ನ ತಂದೆ ತಾಯಿಯನ್ನು ನೋಡಿಕೊಳ್ಳಬೇಕಾಗಿದೆ. ಮುದುವರೆಯ ಮುಂಚೆ ಆಕೆ HDFC Bank ನಲ್ಲಿ ರೂ. 25 ಸಾವಿರ ಹಣ ದುಡಿಯುತ್ತಿದ್ದರು.ನನ್ನ ಹೆಂಡತಿ MBA Graduate. ಅವರ ಕುಟುಂಬಕ್ಕೂ ಒಳ್ಳೆಯ ಆದಾಯವಿದೆ ಅವರಿಗೂ ಕಾಫಿ ಮೆಣಸು ತೋಟ 15 ರಿಂದ 20 ಎಕರೆ ಇದೆ. ಅವರಿಗೆ ವಾರ್ಷಿಕ ಅಂದಾಜು 700 ರಿಂದ 800 ಕಾಫಿ ಚೀಲ ಸಿಗಬಹುದು. ನನಗೆ 5 ಎಕರೆ ಕಾಫಿ ತೋಟವಿದ್ದು, 50 ಚೀಲ ಕಾಫಿ ಮಾತ್ರ ಸಿಕ್ಕಿದೆ ನನಗೆ ಬೇರೆ ಯಾವುದೇ ಆದಾಯವಿಲ್ಲ, ನಾನು ವ್ಯವಸಾಯ ಮಾತ್ರ ಮಾಡುತ್ತೇನೆ. ಇದುವರೆಗೂ ನಾನು ನಮ್ಮ ತಂದೆ ತಾಯಿ ಅವರಿಗೆ ಯಾವುದೇ ರೀತಿ ಕಷ್ಟ ಕೊಟ್ಟಿಲ್ಲ, ನಾನು ಗೋಣಿಕೊಪ್ಪದಲ್ಲಿ ಈಗ ಬಾಡಿಗೆಗೆ ಇರುವ lease agreement ಹಾಜರುಪಡಿಸಿದ್ದು ಅದನ್ನು ನಿ. ಆರ್ 1 ಎಂದು ಗುರುತಿಸಲಾಯಿತು. ಆದ್ದರಿಂದ ಈ ಅರ್ಜಿಯನ್ನು ವಜಾಗೊಳಿಸಬೇಕಾಗಿ ಕೋರುತ್ತೇನೆ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/xxx-

ಸಿವಿಲ್ ನ್ಯಾಯಾಧೀಶರು, ಪೊನ್ನಂಪೇಟೆ.